# ಕರ್ನಾಟಕ ವಿಧಾನ ಪರಿಷತ್ತು.

| | |
|---|---|
| ಚುಕ್ಕೆ ಗುರುತಿಲ್ಲ ದ ಪ್ರಶ್ನೆ ಸಂಖ್ಯೆ | 1119 |
| ವಿಧಾನ ಸಭಾ ಸದಸ್ಯರ ಹೆಸರು | ಶ್ರೀ ಮಂಜುನಾಥ ಭಂಡಾರಿ<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತ ರಾದವರು) |
| ಉತ್ತರಿಸಬೇಕಾದ ದಿನಾಂಕ | 15.12.2023 |
| ಉತ್ತರಿಸುವ ಸಚಿವರು | ಮಾನ್ಯ ಪರಿಶಿಷ್ಟ ಪಂಗಡಗಳ ಕಲ್ಯಾಣ,<br>ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಅತೀ ಹಿಂದುಳಿದ ಪಂಗಡಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ನಿಯಮಗಳಾವುವು: ಪ್ರಸ್ತುತ ಎಷ್ಟು ಪಂಗಡಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆಗೊಳಿಸಲಾಗಿದೆ: ಸೇರ್ಪಡೆಗೊಳಿಸುವ ಪ್ರಕ್ರಿಯೆಯ ಕಾರ್ಯವಿಧಾನಗಳಾವುವು: (ವಿವರ ನೀಡುವುದು) | ರಾಜ್ಯದಲ್ಲಿ ಅತೀ ಹಿಂದುಳಿದ ಪಂಗಡಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ನಿಯಮಗಳು ಈ ಕೆಳಕಂಡಂತಿವೆ.<br>1. ಅಧಿಮ ಲಕ್ಷಣಗಳು,<br>2. ಭೌಗೋಳಿಕ ಪ್ರತ್ಯೇಕತೆ,<br>3. ವಿಶಿಷ್ಟ ಸಂಕೃತಿ,<br>4. ಸಮುದಾಯಗಳೊಡನೆ ಬೆರೆಯಲು ನಾಚಿಕೆ/ಸಂಕೋಚ ಸ್ವಭಾವ,<br>5. ಹಿಂದುಳಿಯುವಿಕೆ,<br>ಈ ಮೇಲ್ಕಂಡ ಮಾನದಂಡಗಳನ್ನು ಅಳವಡಿಸಿಕೊಂಡು, ಅಧ್ಯಯನ ಕೈಗೊಳ್ಳಲಾಗುವುದು.<br>ಪ್ರಸ್ತುತ ಕರ್ನಾಟಕ ರಾಜ್ಯ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ 50 ಜಾತಿಗಳು ಸೇರಿರುತ್ತವೆ. |

| | | |
|---|---|---|
| ಆ | ಭಾಷಾ ಪ್ರಾಂತ್ಯವಾರು ಮರು ವಿಂಗಡಣೆಯ ನಂತರ ಈವರೆಗೆ ಎಷ್ಟು ಪಂಗಡಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆಗೊಳಿಸಲಾಗಿದೆ: ಯಾವ ಆಧಾರದ ಮೇಲೆ ಈ ಕ್ರಮವನ್ನು ಜರುಗಿಸಲಾಗಿದೆ: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಯಾವ ಯಾವ ಪಂಗಡಗಳು ರಾಜ್ಯದ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರಿವೆ: (ವಿವರ ನೀಡುವುದು) | ಭಾಷಾ ಪ್ರಾಂತ್ಯವಾರು ಮರು ವಿಂಗಡಣೆಯಾದ ನಂತರ ಒಟ್ಟು-44 ಪಂಗಡಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲಾಗಿದೆ.<br>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊರಗ, ಮಲೆಕುಡಿಯ, ಇರುಳಿಗ, ಅಸಲರು, ರಾಜಗೊಂಡ, ಮರಾಠ, ಮತ್ತು ಇತರೆ ಸಮುದಾಯಗಳು.<br>ಉಡುಪಿ ಜಿಲ್ಲೆಯಲ್ಲಿ ಕೊಂಡಕಾಪೋಸ್, ಮಲೆಕುಡಿಯ, ಮರಾಠಿ, ರಾಜಗೊಂಡ, ಅಸಲರು, ಡೋಗ್ರಿಗೆರಾಸಿಯಾ, ಗೌಡಲು, ಜೇನುಕುರುಬ, ಮಲೇರು, ಕುಡಿಯ, ಕಮ್ಮಾರ, ಮರಾಠ, ಮತ್ತು ಇತರೆ ಸಮುದಾಯಗಳು. |
| ಇ | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಹಿಂದಿನ ಮದ್ರಾಸ್ ಪ್ರಾಂತ್ಯದಲ್ಲಿ ಡಿಪ್ರೆಸ್ಸಡ್ ಕ್ಲಾಸ್ ಮತ್ತು ಪ್ರಿಮುಟಿವ್ ಟ್ರೈಬ್ ಆಗಿದ್ದರೂ ಕುಡುಬಿ ಪಂಗಡವನ್ನು ಇನ್ನೂ ಪರಿಶಿಷ್ಟ ಪಂಗಡಕ್ಕೆ ಯಾವ ಕಾರಣಕ್ಕಾಗಿ ಸೇರ್ಪಡೆಗೊಳಿಸಿರುವುದಿಲ್ಲ: ಈ ಪಂಗಡದ ಸಾಮಾಜಿಕ ಆರ್ಥಿಕ ಸ್ಥಿತಿಯನ್ನೊಳಗೊಂಡಂತೆ ಜನಸಂಖ್ಯಾ ಶಾಸ್ತ್ರ ಅಧ್ಯಯನ ವರದಿ ಇದೆಯೇ: ಈ ಬಗ್ಗೆ ಕುಡುಬಿ ಪಂಗಡದ ಮುಖಂಡರು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡುವ ಬಗ್ಗೆ ಮನವಿ ಸಲ್ಲಿಸಿದ್ದಾರೆಯೇ: ಈ ಕುರಿತು ಸರ್ಕಾರದ ಕ್ರಮವೇನು: (ಸಂಪೂರ್ಣ ಮಾಹಿತಿ ನೀಡುವುದು) | ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯು ಕುಡುಬಿ ಸಮುದಾಯದ ಕುಲಶಾಸ್ತ್ರೀಯ ಅಧ್ಯಯನ ಕೈಗೊಂಡು ಅಂತಿಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಇದರನ್ವಯ ರಾಜ್ಯ ಸರ್ಕಾರದ ಶಿಫಾರಸ್ಸಿನೊಂದಿಗೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. ಈ ಕುರಿತು ಭಾರತ ಸರ್ಕಾರದ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ ರವರು ಕೆಲವು ಹೆಚ್ಚುವರಿ ಮಾಹಿತಿಯ ಸ್ಪಷ್ಟೀಕರಣವನ್ನು ಕೇಳಿರುವ ಹಿನ್ನೆಲೆಯಲ್ಲಿ ಸ್ಪಷ್ಟೀಕರಣ ನೀಡುವ ಪ್ರಕ್ರಿಯೆ ಬಾಕಿ ಇರುತ್ತದೆ. |

| | | |
|---|---|---|
| ಈ | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಯಾವ್ಯಾವ ಪಂಗಡಗಳ ಮಾನವ ಶಾಸ್ತ್ರೀಯ/ಕುಲಶಾಸ್ತ್ರೀಯ ಅಧ್ಯಯನ ವನ್ನು ಕರ್ನಾಟಕ ಸರ್ಕಾರ ಮಾಡಲು ಆದೇಶಿಸಿತ್ತು:<br>(ಪಂಗಡವಾರು ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆಯ ಕುಡುಬಿ ಜನಾಂಗ ಮತ್ತು ಹಾಲಕ್ಕಿ ಒಕ್ಕಲು ಜನಾಂಗದವರ ಕುಲಶಾಸ್ತ್ರೀಯ ಅಧ್ಯಯನ ಮಾಡಲು ಸರ್ಕಾರ ಆದೇಶ ಮಾಡಲಾಗಿರುತ್ತದೆ. |
| ಉ | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿರುವ ಕುಡುಬಿ ಜನಾಂಗದ ಬದಲು ಈ ಉಭಯ ಜಿಲ್ಲೆಯಲ್ಲಿ ವಾಸ್ತವ್ಯವಿರದ ಕುಡುಂಬನ್ ಜನಾಂಗವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿದ್ದನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | ಕುಡುಂಬನ್ ಜನಾಂಗವನ್ನು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರಿಸಿರುವುದಿಲ್ಲ. ಹಾಗೂ ಈ ಜನಾಂಗದ ಬಗ್ಗೆ ಯಾವುದೇ ಅಧ್ಯಯನಗಳನ್ನು ಕೈಗೊಂಡಿರುವುದಿಲ್ಲ. |

ಸಕ ಇ 276 ಎಸ್ ಟಿಪಿ 2023

(ಬಿ. ನಾಗೇಂದ್ರ)
ಪರಿಶಿಷ್ಟ ಪಂಗಡಗಳ ಕಲ್ಯಾಣ,
ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವರು